ಹಾಜರಾದ. ಒಂದು ದಿನ ಬೆಳಗಿನ ಎಂಟು ಗಂಟೆ ಹೊತ್ತಿಗೆ ಕೈಯಲ್ಲೊಂದು ಟ್ರಂಕು, ಕಂಕುಳಲ್ಲಿ ನ್ಯೂಸ್ ಪೇಪರು, ತಲೆಗೆ ಸುತ್ತಿದ ಬಿಳಿ ಬೈರಾಸಿನೊಡನೆ ಪ್ರತ್ಯಕ್ಷನಾದ. ಉಕ್ಕಿ ಬಂದ ಸಂತಸ ತಡೆಯಲಾರದೆ ನಾನು ಒಮ್ಮೆಗೆ 'ಆಚಾರಿ...' ಎಂದು ಕಿರುಚುತ್ತ ಹೊರಗೋಡಿದಾಗ ಅಮ್ಮ ಬಂದು ನನ್ನ ತಲೆಗೊಂದು ಮೊಟಕಿ ಕೈಹಿಡಿದು ಹಿಂದಕ್ಕೆಳೆದಳು. ಇತ್ತೀಚೆಗೆ ಅಮ್ಮ ಯಾಕೊ ವೇಲುವನ್ನು ಇಷ್ಟಪಡದೆ ಒಳಗೇ ಗೊಣಗುತ್ತಿದ್ದಳು. 'ಕುಡಿತಾನಲ್ಲ, ಮತ್ತೇನು ಮಾಡ್ತಾನೊ ನಂಬುವುದು ಹೇಗೆ?' ಎಂದು ಅಜ್ಜಿ –ಅಮ್ಮ ಮಾತಾಡಿಕೊಳ್ತಿದ್ರು. ಯಾಕೆ ಅವನನ್ನು ನಂಬಬಾರದು? ಅದೇನು ಕುಡಿತಾನೆ? ನನಗೆ ತಿಳಿಲಿಲ್ಲ. ಈ ಬಾರಿ ವಿಸ್ಮಯ ಅಂದರೆ ಬರುವಾಗ ಅವನು ನನಗೊಂದು ಹೊಸ ಅಂಗಿ ತಂದಿದ್ದ. ಆ ಕಾಲಕ್ಕೆ ಸಹಜವಾದ ಅದರ ಬಣ್ಣ ವಿನ್ಯಾಸಗಳೊಂದಿಗೆ ಮೈತುಂಬ ತುಂಬಿ ತುಳುಕುತ್ತಿದ್ದ ಸಂಭ್ರಮ ಸಡಗರಗಳು ಮನದ ಪುಸ್ತಕದ ಪುಟಗಳಲ್ಲಿ ಅಚ್ಚಾಗಿ ಉಳಿದವು. ಕೂಡಲೇ ಕೈಗೆಳೆದು ಓಡಿ ಹೋಗಿ ಕಪಾಟಿನಲ್ಲಿ ನನ್ನದಾದ ಜಾಗದಲ್ಲಿಟ್ಟೆ. ಅಪ್ಪ ಅಲ್ಲಿಗೇ ನಸುನಕ್ಕರು.

ಮಂಚದ ಕಾರ್ಯಕ್ರಮಗಳಲ್ಲಿ ಮತ್ತೆ ಅಂಗಳಕ್ಕೆ ಹೊಸ ಸದ್ದಿನ, ಕಾಯಕದ, ಬದ್ಧತೆಯ, ಸಹವಾಸದ ಸಂಗೀತದ ರಂಗೇರಿತು. ಕಪಾಟಿನ ಅತಿಶಯವನ್ನು ಕಂಡು ಬೆರಗಾದವರೆಲ್ಲಾ ಮತ್ತೆ ಬಂದು ಮಂಚದ ನಿರ್ಮಾಣದಲ್ಲಿ ನಿಕಟವಾಗಿ ನಿಂತಿರುತ್ತಿದ್ದರು. ವೇಲು ಯಾರನ್ನೂ ಲೆಕ್ಕಿಸದೆ ತನ್ನ ಕೆಲಸದಲ್ಲಿ ತೊಡಗಿರುತ್ತಿದ್ದ. ಹಂತ ಹಂತವಾಗಿ ಮಂಚದ ಕೆಲಸದಲ್ಲಿ ಒಂದೊಂದೇ ಅಂಗಾಂಗಗಳು ರೂಪುಗೊಳ್ಳುತ್ತಿದ್ದಾಗ ಅದರಲ್ಲಿ ಸೇರಿಕೊಂಡು ಅನುಭವಿಸುವ ನನ್ನ ಮತ್ತು ಅಜ್ಜಿಯ ಸ್ಪಂದನಗಳನ್ನು ಮಾತ್ರ ಆತ ತೀರ ಗೌರವವಾಗಿ ಕಾಣುತ್ತಿದ್ದ. ಆ ದಿನಗಳಲ್ಲಿ ಶಬರಿಮಲೆ ಸೀಸನ್ ತೊಡಗಿತ್ತು. ಒಂದು ಮುಹೂರ್ತದಲ್ಲಿ ಮಂದಿರಕ್ಕೆ ಹೋಗಿ ಮಾಲೆ ಹಾಕಿಸಿಕೊಂಡು, ಕಪ್ಪು ಬಟ್ಟೆ ಧರಿಸಿ ಬಂದ ವೇಲು ಆಮೇಲೆ ತನ್ನ ವಾಸ್ತವ್ಯದ ವ್ಯವಸ್ಥೆಯನ್ನೆಲ್ಲಾ ಬದಲಿಸಿಕೊಳ್ಳಬೇಕಾಯ್ತು. ಮನೆಯ ಊಟವೂ ನಿಷಿದ್ಧ ಎಂದಿತ್ತು. ಅಂಗಳದ ಮೂಲೆಯಲ್ಲಿ ಸಣ್ಣ ಚಪ್ಪರವೊಂದನ್ನು ಕಟ್ಟಿಕೊಂಡ. ಹಿತ್ತಲ ತೆಂಗಿನ ಮರಗಳಿಂದ ತಂದ ಹತ್ತಾರು ಮಡಲುಗಳ ಮಾಡು ತಯಾರಾಯ್ತು. ಹಸಿಮಡಲುಗಳನ್ನು ಚಂದವಾಗಿ ಹೆಣೆದ ಚಾಪೆಗಳು ಬದಿಯ ತಡಿಕೆಗಳಾದವು. ವೇಲು ಕತ್ತಲೆಗೆ ಕೂತು ಮಡಲು ಹೆಣೇತಾಯಿದ್ರೆ ಅಜ್ಜಿಯೂ ಜತೆಗೆ ಸೇರಿಕೊಂಡು ಅವನಷ್ಟೆ ಚುರುಕಾಗಿ ನಾಲ್ಕಾರು ಮಡಲುಗಳನ್ನು ಹೆಣೆದು ಕೊಟ್ಟಿದ್ದರು. ಕೃತಜ್ಞತೆಯಿಂದ ಕೈಮುಗಿದಿದ್ದ. 'ಮಾರೀಚ, ಅಷ್ಟು ದಿನವಾದ್ರೂ ಕುಡಿಯದೇ ಇರ್‍ತಾನಲ್ಲ...' ಅಂತ ಅಜ್ಜಿಗೆ ಸಮಾಧಾನ. 'ಮಾರೀಚ' ಎನ್ನುವುದು ನಮ್ಮ ಮನೆ ಭಾಷೆಯ ಲಲಿತವಾದ ಒಂದು ಬೈಗಳಾಗಿತ್ತು. ಪ್ರತಿದಿನ ಬೆಳಗಿನ ಹೊತ್ತಿಗೆ ಉಪ್ಪಿಟ್ಟು ಮಾಡಿ ತಿನ್ನುತ್ತಿದ್ದ. ಒಗ್ಗರಣೆ ಕಂಪು ಸೀದಾ ನಮ್ಮ ಮನೆಯೊಳಗೇ ಬರುತ್ತಿತ್ತು. ಮಧ್ಯಾಹ್ನಕ್ಕೆ ಬೆಳ್ತಿಗೆ ಅನ್ನ–ಸಾರು. ರಾತ್ರಿಗೆ ಗೋಧಿ ಹುಡಿ ಕಲಸಿ ಹಿಟ್ಟು ಮಾಡಿ ಅವನು ತಯಾರಿಸುತ್ತಿದ್ದ ತೆಳ್ಳನೆಯ ಟ್ರೇಸ್‌ಪೇಪರಿನಂತಹ ದೋಸೆಗಳು, ಒಂದು ಸಾತ್ವಿಕ ಸಂತೃಪ್ತಿಯನ್ನು ತಮಗೆ ತಾವೇ ಬಳಿದುಕೊಂಡಂತೆ ತೋರುತ್ತಿದ್ದವು. ಅಲ್ಲೇ ಕೂತು ನೋಡುತ್ತಿದ್ದ ನನಗೆ ಮೊದಲಿಗೇ ಒಂದೆರಡು ದೋಸೆಗಳನ್ನು ಕೊಡುತ್ತಿದ್ದ. ಸವರಿದ ತೆಂಗಿನೆಣ್ಣೆಯ ಗಮನೀಯ ಪರಿಮಳ ಮತ್ತು ಗೋಧಿಯ ಹದವಾದ ಸವಿ ಮೇಳೈಸಿದ ಆ ಅಪೂರ್ವ ರಸತಂತ್ರ ನಾನೆಂದೂ ಮರೆಯುವಂತಿಲ್ಲ. ಅಮ್ಮ ಬೈದರೂ ಅಜ್ಜಿ ಯಾಕೊ ಆಕ್ಷೇಪಿಸಲಿಲ್ಲ. ತೀರ ಆಸ್ತಿಕನಂತಿದ್ದ ವೇಲು ಕೆಲವೊಮ್ಮೆ ಪರಮನಾಸ್ತಿಕನಂತೆ ಎಲ್ಲದಕ್ಕೂ ಹೊರತಾಗಿರುತ್ತಿದ್ದ. 'ಅವನೊಬ್ಬ ಅನಾಸ್ತಿಕ' ಎನ್ನುತ್ತಿದ್ದರು ಅಪ್ಪ. 'ನಮ್ಮನ್ನು ಹುಟ್ಟಿಸಿದ ದೈವ ಒಂದೇ. ನಾವು ಹುಟ್ಟಿಸಿರುವ ದೇವರೆಷ್ಟು ಮಾಸ್ವೆ' ಅಂದಿದ್ದ–ನಿಜವಲ್ವೆ?

ತುಂಬಾ ಚಳಿ ಇದ್ದ ದಿನಗಳು. ಆ ಚಪ್ಪರ, ಚಳಿನೀರು–ಹೇಗಿರ್ತಾನೊ ಎಂದು ಕಸಿವಿಸಿಯಿತ್ತು. ಅಜ್ಜಿಯ ಬಳಿಯೇ ಮಲಗ್ತಾ ಇದ್ದೆ–ಯಾವಾಗಲೂ ಅವರಿಗೇ ಒತ್ತಿಕೊಂಡು. ಒಂದು ದಿನ ತಡರಾತ್ರಿಗೆ